# ಚಿಗುರು!

ಒಂದು ಸಂಜೆ, ದಿನಸಿ ತರಕಾರಿಗಳನ್ನು ತುಂಬಿದ ವ್ಯಾನು ಅಪಾರ್ಟ್‌ಮೆಂಟಿನ ಮುಂದೆ ಬಂದು ನಿಂತಿತು. ಅದನ್ನು ಇಳಿಸುವವರು ಒಂದೊಂದು ವಸ್ತುಗಳನ್ನೂ ದಢಬಡನೆ ಬ್ಯಾಸ್ಕೆಟ್ಟಿಗೆ ಹೊತ್ತು ಹಾಕುತ್ತಿದ್ದರು. ಆ ರಭಸಕ್ಕೆ ಹೆಸರುಕಾಳಿನ ಪ್ಯಾಕೆಟ್ ಒಡೆದೇಹೋಯ್ತು. ಡೆಲಿವರಿ ಬಾಯ್, ಆರ್ಡರನ್ನು ಡೆಲಿವರಿ ಕೊಟ್ಟು ಹೊರಟುಹೋದ. ಪ್ಯಾಕೆಟ್ ಒಡೆದಿರುವುದನ್ನು ಯಾರೂ ಗಮನಿಸಲೇ ಇಲ್ಲ. ಒಂದೊಂದೇ ವಸ್ತುಗಳನ್ನು ಒಳಗಿಡಲು ಅಮ್ಮನಿಗೆ ಸಹಾಯ ಮಾಡುತ್ತಿದ್ದ ಶಮಿ, ಹೆಸರು ಕಾಳಿನ ಪ್ಯಾಕೆಟ್ಟನ್ನೆತ್ತಲು, ಕಾಳುಗಳೆಲ್ಲಾ ಸೊರ್ರನೆ ಜಾರಿ ಚೆಲ್ಲಾಪಿಲ್ಲಿಯಾದುವು. ತಾನೇನೋ ಮಾಡಬಾರದ ತಪ್ಪು ಮಾಡಿದಂತೆನಿಸಿ, ತಪ್ಪಿತಸ್ಥ ಭಾವದಿಂದ ಅಮ್ಮನ ಮುಖ ನೋಡಿದಳು.

‘ಅಯ್ಯೋ! ಆರ್ಗ್ಯಾನಿಕ್ ಹೆಸರುಕಾಳು. ಕೇಜಿಗೆ ನೂರ ಎಪ್ಪತ್ತು! ಸರಿಯಾಗಿ ಪ್ಯಾಕ್ ಮಾಡೋದಕ್ಕೆ ಸಂಕಟ ಇವರಿಗೆ!’ ಎಂದು ಕಣ್ಣಿನಗುಡ್ಡೆಗಳನ್ನು ಟೆನಿಸ್ ಬಾಲ್‌ನಂತೆ ಮಾಡುತ್ತಾ ಅಮ್ಮ ಬರಬರನೆ ಎಲ್ಲ ಕಾಳುಗಳನ್ನೂ ಬಾಚಿ ತೆಗೆದು ನೆಲವನ್ನು ಕ್ಲೀನ್ ಮಾಡಿದಳು. ಆಮೇಲೆ ಕಾಳನ್ನೂ ಕ್ಲೀನ್ ಮಾಡಿದಳು. ಇಲ್ಲಿ ಆರ್ಗಾನಿಕ್ ಎಂಬುದರ ಪಾತ್ರವೇನು ಎಂದು ಶಮಿ ಯೋಚಿಸತೊಡಗಿದಳು. ‘ಅಮ್ಮಾ, ಆರ್ಗ್ಯಾನಿಕ್ ಪ್ರಿಫಿಕ್ಸ್ ಇಲ್ಲಾ ಅಡ್‌ವರ್ಬಾ’ ಎಂದು ಕೇಳಿದಳು. ಈಗ ಮಾಡಲು ಸಿಕ್ಕಾಪಟ್ಟೆ ಕೆಲಸ ಇದೆ. ಸುಮ್ಮನೇ ಜಾಸ್ತಿ ತಲೆ ತಿನ್ನಬೇಡವೆಂದು ಅಮ್ಮ ರೇಗಿದಳು. ಇದರಿಂದ ಶಮಿಗೆ ಉತ್ತರ ಸಿಕ್ಕಂತಾಗಲಿಲ್ಲ. ‘ಅಯ್ಯೋ! ಆರ್ಗ್ಯಾನಿಕ್ ಹೆಸರು ಕಾಳು. ಕೇಜಿಗೆ ನೂರ ಎಪ್ಪತ್ತು!’ ಇದರಲ್ಲಿ ಯಾವುದಕ್ಕೆ ಇಂಪಾರ್ಟೆನ್ಸ್ ಕೊಡಬೇಕಾಗಿರುವುದು ಎಂದವಳು ಯೋಚಿಸತೊಡಗಿದಳು.

ಡೆಲಿವರಿ ಬಾಯ್ ಕೊಟ್ಟು ಹೋಗಿದ್ದ ಸಾಮಗ್ರಿಗಳಲ್ಲಿ ಪಿಂಕ್ ಓರಿಯೋ ಬಿಸ್ಕೆಟ್ಟೂ ಇತ್ತಾದ್ದರಿಂದ ಅಮ್ಮನ ಬಳಿ ಅದನ್ನು ಕೇಳಿ ಪಡೆದುಕೊಂಡು ಒಂದೊಂದೇ ಬಿಸ್ಕೆಟ್ ತಿನ್ನುತ್ತಾ ಈಗ ತಾನೇ ಅಮ್ಮ ಉಲಿದಿರುವ ಸಾಲಿನಲ್ಲಿ ಮುಖ್ಯವಾದದ್ದೇನೆಂದು ಮತ್ತೆ ಮತ್ತೆ ಯೋಚಿಸುತ್ತಾ ಕುಳಿತಳು. ಈ ಯೋಚನೆಯಿಂದಾಗಿ ಬಿಸ್ಕೆಟ್ ಚಪ್ಪರಿಸಬೇಕೆಂದು ಎನಿಸುತ್ತಿರುವುದೋ ಇಲ್ಲಾ ಬಿಸ್ಕೆಟ್‌ನ ರುಚಿಯಿಂದಾಗಿ ಈ ಯೋಚನೆಯನ್ನೇ ಚಪ್ಪರಿಸುವಂತಾಗುತ್ತಿರುವುದೋ ಎಂಬ ಹೊಸ ಪ್ರಶ್ನೆಯೊಂದು ಆಕೆಗೆ ಕಾಡತೊಡಗಿತು. ಇಷ್ಟೊಂದು ಬಿಸ್ಕೆಟ್ ತಿಂದ್ರೆ ಆಮೇಲೆ ಊಟ ಯಾರು ಮಾಡ್ತಾರೆ? ಎಂದು ಎಲ್ಲಿಂದಲೋ ಧಾವಿಸಿದ ಅಮ್ಮ, ಉಳಿದ ಬಿಸ್ಕೆಟ್‌ಗಳನ್ನು ಕಸಿದು ಬಂದ ವೇಗದಲ್ಲೇ ಪುನಃ ಹೋದಳು. ಅವಳಿಗೆ ಕೊನೆಯದಾಗಿ ಇನ್ನೊಂದು ಬಿಸ್ಕೆಟ್ ತಿನ್ನೋಣವೆನಿಸಿತಾದರೂ ಈಗ ಅಮ್ಮನನ್ನು ಕೇಳುವ ಧೈರ್ಯ ಬರಲಿಲ್ಲ. ಬಿಸ್ಕೆಟ್‌ನ ಆಸೆಯನ್ನು ಮೀರಿಸುವ ಪ್ರಶ್ನೆಯೊಂದು ತಲೆಯಲ್ಲಿ ಸುತ್ತುತ್ತಿದ್ದುದರಿಂದ ಅವಳಿಗೆ ಬಿಸ್ಕೆಟ್ ವಿಚಾರ ಮರೆತೇಹೋಯಿತು.

‘ಅಯ್ಯೋ! ಆರ್ಗ್ಯಾನಿಕ್ ಹೆಸರುಕಾಳು. ಕೇಜಿಗೆ ನೂರ ಎಪ್ಪತ್ತು!’ ಸಾಲು ಮತ್ತೆ ಮತ್ತೆ ಅವಳ ತಲೆಯೊಳಗೆ ಮೊಳಗಿತು. ಇದರೊಳಗಿನ ಗೂಢಾರ್ಥವನ್ನು ಅಪ್ಪನ ಬಳಿಯಾದರೂ ಕೇಳಿ ತಿಳಕೊಳ್ಳಬೇಕೆಂದು ನಿರ್ಧರಿಸಿ, ಅಪ್ಪ ಬರುವುದಕ್ಕೇ ಕಾದಳು. ಆದರೆ ಅಪ್ಪ ಬಂದ ಮೇಲೆ, ಅವಳು ಇದಕ್ಕೂ ಮೊದಲೇ ಕೇಳಬೇಕು ಎಂದುಕೊಂಡ ಎಷ್ಟೊಂದು ವಿಚಾರಗಳು ಇದ್ದುದರಿಂದ ಆರ್ಗ್ಯಾನಿಕ್ ಕಾಳಿನ ವಿಷಯ ಮರೆತೇಹೋಯಿತು. ಮರುದಿನ ಶಾಲೆಗೆ ಹೊರಟಾಗಲೇ ಅವಳಿಗೆ ಮತ್ತೆ ಈ ಆರ್ಗ್ಯಾನಿಕ್ ವಿಚಾರ ನೆನಪಾದದ್ದು. ಕೆಳಗೆ ಚೆಲ್ಲಾಪಿಲ್ಲಿಯಾಗಿ ಬೀಳುವ ಭರದಲ್ಲಿ, ಯಾವುದೋ ಒಂದು ಕಾಳು ಶಮಿಯ ಶೂ ಸೇರಿತ್ತು. ಯೂನಿಫಾರ್ಮ್ ಹಾಕಿ, ಸಾಕ್ಸೂ ಹಾಕಿ, ಶೂ ಹಾಕುವ ವೇಳೆ, ಶಮಿಗೆ ಈ ಕಾಳಿನ ಭೇಟಿಯಾಯ್ತು. ಕಾಳನ್ನು ನೋಡುತ್ತಾ, ಅವಳ ತಲೆಯೊಳಗೆ ಯಾವುದೋ ಹೊಸ ಯೋಚನೆಯೊಂದು ಹೊಳೆದು ಅಮ್ಮನನ್ನು ಕೂಗಿದಳು. ‘ಅಮ್ಮಾ... ಆರ್ಗ್ಯಾನಿಕ್ ಅಂದ್ರೆ ಮಡ್ಡಲ್ಲಿ..’ ಶಮಿಗೆ ಪೂರ್ತಿಯಾಗಿ ಮಾತನಾಡಲೇ ಬಿಡದೆ, ‘ಬೆಳ್ ಬೆಳಗ್ಗೆ ಶುರು ಮಾಡ್ಕೊಬೇಡ ನಿಂದು... ಪ್ಲೀಸ್..! ಲೇಟಾಗಿದೆ. ದಯವಿಟ್ಟು ಬೇಗ ಶೂಸ್ ಹಾಕಿ ಹೊರಡು’ ಎಂದು ಕೂಗಾಡಿದಳು. ‘ಆರ್ಗ್ಯಾನಿಕ್ ಅಂದ್ರೆ ರಿಸೈಕಲ್ಲೇಬಲ್ ಅಲ್ವಾ ಅಂತ ಕೇಳಿದ್ದು ಅಷ್ಟೇ...’ ಎಂದು ಶಮಿಯೂ ಕೂಗಾಡಿ ಹುಬ್ಬು ಗಂಟಿಕ್ಕಿ ಕೆನ್ನೆಯುಬ್ಬಿಸಿದಳು. ಆ ಮೊಳಕೆಕಾಳನ್ನು ಅಲ್ಲೇ ಇದ್ದ ಪಾಟ್‌ಗೆ ಹಾಕಿ ಅದೇ ಕೋಪದಲ್ಲೇ ‘ಬಾಯ್’ ಎಂದು ಹೇಳಿ ಹೊರಟಳು. ಡಬ್ಬ ತುಂಬಿಸುವ ಕೊನೆ ಹಂತದ ಧಾವಂತದಲ್ಲಿದ್ದ ಅಮ್ಮ ಓಡೋಡುತ್ತಾ ಸಲ್ವಾರ್‌ನ ದುಪಟ್ಟಾವನ್ನು ಅದು ಹೇಗೋ ಮೈ ಮೇಲೆಳೆಯುತ್ತಾ ಸ್ಕೇಟಿಂಗ್ ಮಾಡಿದಂತೆ ಧಾವಿಸಿ ಶಮಿಯನ್ನು ಸೇರಿದಳು. ಡಬ್ಬ ಕೊಟ್ಟು, ಅದಾಗಲೇ ಬಂದು ನಿಂತಿದ್ದ ಸ್ಕೂಲ್ ವ್ಯಾನ್ ಹತ್ತುತ್ತಿದ್ದ ಶಮಿಗೆ ಟಾಟಾ ಮಾಡಿ ಉಸಿರೆಳೆದುಕೊಂಡಳು.



ಈ ಕ್ಷಣದಿಂದ ಶಮಿಯ ತಲೆಯೊಳಗೆ ಹೊಸದೇ ಆದೊಂದು ವಿಚಾರ ಓಡಲು ತೊಡಗಿತು. ಪಾಟ್‌ನಲ್ಲಿ ಹಾಕಿದ್ದ ಆ ಆರ್ಗ್ಯಾನಿಕ್ ಕಾಳು ಏನಾಗುತ್ತದೆ? ಶಾಲೆಯಿಂದ ಬರುವಾಗಲೂ ಹೋಗುವಾಗಲೂ ಅವಳಿಗೆ ಇದೇ ಕೆಲಸ. ಶೂ ಬಿಚ್ಚುವಾಗಲೂ ಮರುದಿನ ತೊಡುವಾಗಲೂ ಅವಳ ತಲೆಯೊಳಗೆ ಇದೇ ವಿಚಾರಗಳು ಸುತ್ತುತ್ತಿರುತ್ತವೆ. ಅದು ಮಣ್ಣಿನಲ್ಲಿ ಕರಗಿರಬಹುದೇ? ಮಣ್ಣಿನೊಳಗಿನ ಬ್ಯಾಕ್ಟೀರಿಯಾಗಳು ಅದನ್ನು ತಿಂದಿರಬಹುದೇ? ಅದಕ್ಕೆ ನೀರು ಬೇಕಾಗಬಹುದೇ? ಅದಕ್ಕೆ ಆರ್.ಓ. ನೀರು ಹಾಕಬಹುದೇ? ಅಪ್ಪ ಎಂದಿದ್ದರು, ‘ಮರ ಗಿಡಗಳಿಗೆ ಪ್ಯೂರಿಫೈಡ್ ನೀರು ಹಾಕಬಾರದು, ಅದು ಮನುಷ್ಯರಿಗೆ ಮಾತ್ರ’ ಎಂದು. ಆದರೆ ಈ ಕಾಳುಗಳನ್ನೂ ಸೊಪ್ಪುಗಳನ್ನೂ ನಾವು ತಿನ್ನುತ್ತೇವಲ್ಲಾ, ಅದು ಓಕೇನಾ? ನೆಕ್ಸ್ಟ್ ಟೈಮ್ ಅಪ್ಪನ ಬಳಿ ಇದನ್ನೂ ಕೇಳಬೇಕು ಎಂದುಕೊಂಡಳು – ಪಾಟ್ ನಲ್ಲಿ ಮೊಳಕೆ ಚಿಗುರಿದ್ದನ್ನು ನೋಡುವವರೆಗೂ. ಆಮೇಲೆ ಕೇಳಲು, ಅವಳಿಗೆ ಬೇರೆಯೇ ಪ್ರಶ್ನೆಗಳ ಲಿಸ್ಟ್ ತಯಾರಾದವು.

ಯಾವುದನ್ನು ಮರೆತರೂ ಪಾಟ್‌ಗೆ ನೀರು ಹಾಕುವುದನ್ನು ಮಾತ್ರ ಅವಳು ಮರೆಯಲಿಲ್ಲ. ಇನ್ನೊಂದು ರೌಂಡ್ ನೀರನ್ನು ಅಮ್ಮನೂ ಹಾಕಬೇಕೆಂದು ಅಪ್ಪಣೆ ಮಾಡುವುದನ್ನೂ ಮರೆಯಲಿಲ್ಲ. ಅಮ್ಮನಲ್ಲವೇ ಅವಳು? ಸುಮ್ಮನೇ ಯಾಕೆ ಹೂ ಎಂದಾಳು? ‘ನೀನು ಊಟದ ಡಬ್ಬವನ್ನು ದಿನವೂ ಖಾಲಿ ಮಾಡಿ ತಾ, ನಾನೂ ದಿನವೂ ನಿನ್ನ ಚಿಗುರಿಗೆ ನೀರೆರೆಯುತ್ತೇನೆ’ ಎಂದು ಶಮಿಯನ್ನು ನೋಡಿ ನಕ್ಕಳು. ಈ ಪಾಟ್ ಅನ್ನು ಕಿಟಕಿ ಬಳಿ ಇಟ್ಟರೆ ಹೇಗಿರಬಹುದೆಂದು ಶಮಿ ಯೋಚಿಸತೊಡಗಿದಳು.